**ಪ್ರ ದ ನ್ಯಾದಂಡಾಧಿಕಾರಿಗಳ ನ್ಯಾಯಾಲಯದ ಕುಶಾಲನಗರ**

**ಸಿ ಸಿ ನಂಃ 1033–2023**

ಪ್ರಾಸಾ ಃ 7

ಚಾಸಾ ಃ 12

ಸಾಕ್ಷಿಯ ಹೆಸರು : ಡಾಕ್ಟರ್ ಮಧುಸೂದನ್

ತಂದೆ / ಗಂಡನ ಹೆಸರು : ನಾರಾಯಣ್ ಸ್ವಾಮಿ

ವಯಸ್ಸು : 45

ಉದ್ಯೋಗ : ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರ ವೈದ್ಯಾಧಿಕಾರಿ

ವಾಸ ಸ್ಥಳ : ಕುಶಾಲನಗರ.

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 12.02.2026**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ನಾನು 2019 ರಿಂದ ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿಃ 23.06.2023 ರಂದು ಸಮಯ 10.00 ಗಂಟಗೆ ನಾನು ಕರ್ತವ್ಯದಲ್ಲಿ ಇದ್ದಾಗ, ಚಾಸಾ 1 ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿರುತ್ತಾರೆ ಅವರನ್ನು ಪರೀಕ್ಷಿಸಿದಾಗ, ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. Lacerated Wound 2 X 0.5 cm on the left side forehead

ನಾನು ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಸರಕಾರಿ ಆಸ್ಪತ್ರೆಗೆ ಕಲಳಹಿಸಿಕೊಟ್ಟಿದ್ದು ಅಲ್ಲಿ ವೈದ್ಯಾಧಿಕಾರಿಗಳು ಈ ಕೆಳಕಂಡತೆ ಗಾಯ ಕಂಡುಬರುತ್ತದೆ ಎಂದು ತಿಳಿಸಿರುತ್ತಾರೆ.

1. Soft tissue injury on the forehead.

2. Soft tissue injury on the chest.

ನನ್ನ ಪ್ರಕಾರ ಸದ್ರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಅದರಂತೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ನಿಪಿ–6 ಎಂದು, ಸಾಕ್ಷಿಯ ಸಹಿಯನ್ನು ನಿಪಿ–6ಎ ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಆರೋಪಿ ಪರ ಶ್ರೀ ಬಿ ಕೆ ಆರ್ ವಕೀಲರಿಂದ

ನಾನು ಗಾಯಾಳುವಿಗೆ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿಗೆ ಕಳಹಿಸಿಕೋಟ್ಟಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ 1 ರವರಿಗೆ ಅನುಕೂಲವಾಗುವಂತೆ ನಿಪಿ 6 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಗಾಯಾಳುವಿಗೆ ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಅವರ ಗಾಯದ ಬಗ್ಗೆ ಹೇಳಿರುವ ದಾಖಾಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಪೋಲಿಸರಿಗೆ ಕೊಟ್ಟಿರುತ್ತೇವೆ ಎಂದು ನುಡಿದರು. ಸಾಮಾನ್ಯವಾಗಿ ಬೈಕ್ ನಿಂದ ಬಿದ್ದಾಗ ಮೇಲೆ ತಿಳಿಸಿದ ಗಾಯಗಳು ಆಗುವ ಸಾಧ್ಯತೆ ಇರುತ್ತವೆ ಎಂದರೆ ಸರಿ . ಕಲ್ಲಿನಿಂದ ಹೊಡೆದರೆ ಈ ಮೇಲೆ ತಿಳಿಸಿದ ಗಾಯಗಳು ಆಗುತ್ತವೆ ಎಂದ ಹೇಳಲು ಸಾಧ್ಯವಿಲ್ಲ ಅವು ಸಾಮಾನ್ಯವಾಗಿ ಬಿದ್ದರು ಆಗಬಹುದು. ನಾನು ಚಾಸಾ 1 ರವರಿಗೆ ಚಿಕಿತ್ಸೆ ನೀಡಿರುವುದಿಲ್ಲ ಹಾಗೂ ಯಾವುದೆ ಗಾಯದ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಚಾಸಾ 1 ರವರಿಗೆ ಸಹಾಯವಾಗಲೆಂದು ಸುಳ್ಳು ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ.